**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ.25.09.2024**

## ಪಾಟಿ ಸವಾಲುಃ 2 ನೇ ಪ್ರತಿವಾದಿ ಪರ ಶ್ರೀ.ಎನ್ ಡಿ ಓ ವಕೀಲರಿಂದಃ

3. ದಾವಾ ಆಸ್ತಿಯನ್ನು ನನ್ನ ತಾತ ದೊಡ್ಡ ತಾತಪ್ಪ ರವರು ಖರೀದಿ ಮಾಡಿದ್ದ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ. ಸಾಕ್ಷಿ ಪುನಃ ಮುಂದುವರಿದು ಆ ಬಗ್ಗೆ ನನಗೆ ಗೊತ್ತಿಲ್ಲಾ ದಾವಾ ಆಸ್ತಿ ಪಿತ್ರಾರ್ಜಿತ ಆಸ್ತಿ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿ ನನ್ನ ಅಣ್ಣ. ದಿಃ18.12.2004 ರ ವಿಭಾಗ ಪತ್ರದಂತೆ ದಾವಾ ಆಸ್ತಿ 1 ನೇ ಪ್ರತಿವಾದಿ ಹಿಸ್ಸೆಗೆ ಬಂದಿದೆ ಎಂದರೆ ಸರಿ. ದಾವಾ ಆಸ್ತಿಯು ಖಾಲಿ ಜಾಗ ಆಗಿದ್ದು, ಅದರ ಸುತ್ತ ಮುತ್ತ ಕಾಂಪೌಂಡ್ ಆಗಿರುತ್ತದೆ. ದಿಃ17.03.2005 ರಲ್ಲಿ 1 ನೇ ಪ್ರತಿವಾದಿ ದಾವಾ ಆಸ್ತಿಯನ್ನು ಭೂ ಪರಿವರ್ತನೆ ಮಾಡಿಸಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ಕಾರಣದಿಂದ ದಾವಾ ಆಸ್ತಿಯು 2012 ರಲ್ಲಿ ಕೃಷಿ ಭೂಮಿ ಆಗದೇ ಇದ್ದರೂ ಕೃಷಿ ಭೂಮಿ ಎಂದು ದಾವೆ ಸಲ್ಲಿಸಿದ್ದೇನೆ ಎಂದು ಅರಿಯಲ್ಲ. ನಿಪಿ-1 ರಂತೆ 1 ನೇ ಪ್ರತಿವಾದಿ ರವರು 2 ನೇ ಪ್ರತಿವಾದಿಗೆ ಕ್ರಯ ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ.

4. ಕ್ರಯ ಪತ್ರ ಆದ ದಿನದಿಂದಲೂ 2 ನೇ ಪ್ರತಿವಾದಿ ಸ್ವಾದೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನಾವು ಸ್ವಾಧೀನದಲ್ಲಿದ್ದೇವೆ ಎಂದು ನುಡಿಯುತ್ತಾರೆ. ಆ ರೀತಿ ನಾವು ಸ್ವಾಧೀನದಲ್ಲಿದ್ದೇವೆ ಎಂದು ತೋರಿಸಲು ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಆ ರೀತಿ ನನ್ನ ತಂದೆಯ ಹೆಸರಿನಲ್ಲಿರುವ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ನಿಪಿ-1 ಕ್ರಯ ಪತ್ರ ಆದ ದಿನದಿಂದಲೂ 2 ನೇ ಪ್ರತಿವಾದಿ ಸ್ವಾದೀನದಲ್ಲಿ ಇದ್ದಾರೆ ಎಂದರೆ ಸಾಕ್ಷಿ ನಾವು ಸಹ ಇದ್ದೇವೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಗೆ 2 ನೇ ಪ್ರತಿವಾದಿ ಕಾಂಪೌಂಡ್ ಹಾಕಿಸಿದ್ದಾರೆ ಎಂದರೆ ಸರಿ. ಆ ರೀತಿ ಯಾವಾಗ ಕಾಂಪೌಂಡ್ ಹಾಕಿಸಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ಆ ರೀತಿ ಕಾಂಪೌಂಡ್ ಹಾಕಿರುವುದು 18-19 ವರ್ಷಗಳ ಹಿಂದೆ ಗೊತ್ತಾಗಿರುತ್ತದೆ. ಆ ರೀತಿ ಕಾಂಪೌಂಡ್ ಹಾಕಿರುವುದು 18-19 ವರ್ಷಗಳ ಹಿಂದೆ ಗೊತ್ತಾದ ತಕ್ಷಣ ಕಾನೂನು ಕ್ರಮ ಕೈಗೊಂಡಿರುತ್ತೇವೆ.

5. ನಾನು ಮತ್ತು 1 ನೇ ಪ್ರತಿವಾದಿ ಚೆನ್ನಾಗಿ ಇದ್ದೇವೆ ಎಂದರೆ ಸಾಕ್ಷಿ ಈ ದಾವೆ ಹಾಕಿರುವ ನಂತರ ಹೋಗಿರುವುದಿಲ್ಲ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿ ದಾವಾ ಆಸ್ತಿಯನ್ನು ಮಾರಾಟ ಮಾಡಿದ ನಂತರ ಆತನನ್ನು ನಾವು ಹೋಗಿ ಪ್ರಶ್ನೆ ಮಾಡಿರುವುದಿಲ್ಲ. ನಾನು ಮತ್ತು 1 ನೇ ಪ್ರತಿವಾದಿ ಚೆನ್ನಾಗಿ ಇದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ರೀತಿ ದಾವಾ ಆಸ್ತಿಯ ಬೆಲೆ ಹೆಚ್ಚಾದ ಕಾರಣ 1 ನೇ ಪ್ರತಿವಾದಿ ನಮ್ಮ ಕಡೆಯಿಂದ ಈ ದಾವೆ ದಾಖಲು

ಮಾಡಿಸಿದ್ದಾರೆ ಎಂದರೆ ಸರಿಯಲ್ಲ. ದಿಃ18.12.2004 ರಲ್ಲಿ ನೊಂದಣಿ ವಿಭಾಗ ಪತ್ರ ಆಗಿರುವ ಕಾರಣ ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಬರುವುದಿಲ್ಲ ಎಂದರೆ ಸರಿಯಲ್ಲ. ಆ ವಿಚಾರ ಗೊತ್ತಿದ್ದರೂ ಸಹ ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ 2005 ರಲ್ಲಿ ಇದ್ದ ಸರ್ಕಾರಿ ಮೌಲ್ಯಕ್ಕೆ ಅನುಗುಣವಾಗಿ ದಾವಾ ಆಸ್ತಿಯನ್ನು ಖರೀದಿ ಮಾಡಿದ್ದು ಅದರ ಸಂಪೂರ್ಣ ಹಣವನ್ನು 1 ನೇ ಪ್ರತಿವಾದಿಗೆ ಕೊಟ್ಟಿರುವ ಕಾರಣ ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಬರುವುದಿಲ್ಲ ಎಂದರೆ ಸರಿಯಲ್ಲ.

**(ಮರು ವಿಚಾರಣೆಃ ಇಲ್ಲ.)**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಎ. ಒಪ್ಪಲಾಗಿದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ದೇವನಹಳ್ಳಿ.**

ಪಿಡಬ್ಲೂ-1 ಓ.ಎಸ್.ನಂ.3/2012

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ.25.03.2024**

## ಪಾಟಿ ಸವಾಲುಃ 2 ನೇ ಪ್ರತಿವಾದಿ ಪರ ಶ್ರೀ.ಎನ್ ಡಿ ಒ ವಕೀಲರಿಂದಃ

1. ನಾನು ಯಾವುದೇ ವಿದ್ಯಾಬ್ಯಾಸ ಮಾಡಿರುವುದಿಲ್ಲ. ಈ ದಾವೆ ಸಲ್ಲಿಸಲು ನಮ್ಮ ವಕೀಲರಿಗೆ ನಾವೇ ಮಾಹಿತಿ ನೀಡಿರುತ್ತೇವೆ. ಮುಖ್ಯ ವಿಚಾರಣೆ ಮತ್ತು ವಾದ ಪತ್ರದಲ್ಲಿರುವ ವಿಚಾರವನ್ನು ನಾನು ತಿಳಿದುಕೊಂಡಿರುತ್ತೇನೆ. ಅದರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿರುವುದಿಲ್ಲ. ನನ್ನ ತಾತನ ಹೆಸರು ದೊಡ್ಡದೊಡ್ಡಪ್ಪ. ನನ್ನ ತಾತನಿಗೆ 3 ಜನ ಗಂಡು ಮಕ್ಕಳು. ಅವರುಗಳೆಂದರೆ ಸಂಜೀವಪ್ಪ, ಗಿರಿತಿಮ್ಮಪ್ಪ, ನನ್ನ ತಂದೆ ಪಾಪಣ್ಣ. ನನ್ನ ತಂದೆ ಮತ್ತು ಆತನ ಸಹೋದರರು ಮೃತಪಟ್ಟಿರುತ್ತಾರೆ. ಗಿರಿತಿಮ್ಮಪ್ಪ ತೀರಿಕೊಂಡು 25-30 ವರ್ಷಗಳು ಆಗಿರುತ್ತದೆ. ಸಂಜೀವಪ್ಪ ಅವರಿಗಿಂತ ಮೊದಲೇ ತೀರಿಕೊಂಡಿದ್ದರು. ನನ್ನ ತಂದೆ ತೀರಿಕೊಂಡು 15-20 ವರ್ಷಗಳು ಆಗಿರುತ್ತದೆ. ನನ್ನ ತಂದೆ ಜೀವಂತ ಇದ್ದಾಗ ಯಾವುದೇ ವಿಭಾಗ ಮಾಡಿಕೊಂಡಿರಲಿಲ್ಲ ಎಂದರೆ ಸರಿ. ದಿಃ18.12.2004 ರಲ್ಲಿ ನನ್ನ ಅಣ್ಣ 1 ನೇ ಪ್ರತಿವಾದಿ ಹಾಗೂ ಉಳಿದ ನನ್ನ ಇಬ್ಬರು ದೊಡ್ಡಪ್ಪಂದಿರು ವಿಭಾಗ ಮಾಡಿಕೊಂಡರು ಎಂದರೆ ಸರಿ.

2. ನನ್ನ ತಂದೆಗೆ ನಾವು ಒಟ್ಟು 4 ಜನ ಮಕ್ಕಳು. ಅಂದರೆ ನಾನು, 1 ನೇ ವಾದಿ, 1 ನೇ ಪ್ರತಿವಾದಿ ಮತ್ತು ಮಹದೇವಮ್ಮ. ಸದರಿ ಮಹದೇವಮ್ಮ ನನ್ನ ಅಕ್ಕ ಅವರು ತೀರಿಕೊಂಡು 12 ವರ್ಷದ ಮೇಲೆ ಆಗಿರುತ್ತದೆ. ಅವರಿಗೆ ಗಂಡ ತೀರಿಕೊಂಡಿದ್ದು ಮಕ್ಕಳಿದ್ದಾರೆ ಎಂದರೆ ಸರಿ. ಈ ದಾವೆ ಸಲ್ಲಿಸುವ ಸಂದರ್ಬದಲ್ಲಿ ನನ್ನ ಅಕ್ಕ ಮಹದೇವಮ್ಮ ನ ಗಂಡ ಮತ್ತು ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡುವಂತೆ ನಮ್ಮ ವಕೀಲರಿಗೆ ಮಾಹಿತಿ ನೀಡಿದ್ದೆವು. ಈ ದಾವೆಯಲ್ಲಿ ಮಹದೇವಮ್ಮ ನ ಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಅಕ್ಕ ಮಹದೇವಮ್ಮ ನಿಗೆ ಒಟ್ಟು 4 ಜನ ಗಂಡು ಮಕ್ಕಳು ಮತ್ತು 2 ಹೆಣ್ಣು ಮಕ್ಕಳು.

**(ಈ ಹಂತದಲ್ಲಿ ಮುಂದುವರಿದ ಪಾಟಿ ಸವಾಲಿಗೆ ಕಾಲವಕಾಶ ಕೋರಿದ್ದು, ನೀಡಲಾಯಿತು.)**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಎ. ಒಪ್ಪಲಾಗಿದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ದೇವನಹಳ್ಳಿ.**